ಮಾಡುತ್ತಿದ್ದ ರೈತರೊಬ್ಬರ ಮೇಲ ಮಂಗಳವಾರ ಒಂಟಿಸಲಗ ದಾಳಿ ಮಾಡಿ ಗಾಯಗೊಳಿಸಿದೆ.

ರೈತ ವಿಷಕಂಠಯ್ಯ ಗಾಯಗೊಂಡವರು. ಕೂದಲೆಳೆ ಅಂತರದಲ್ಲಿ ಅವರು ಸಾವಿನಿಂದ ಪಾರಾಗಿದ್ದಾರೆ. ಮಂಗಾಡಹಳ್ಳಿ ಹಾಗೂ ಸಾದರಹಳ್ಳಿ ಮಾರ್ಗದ ಮಧ್ಯದಲ್ಲಿರುವ ತಮ್ಮ ಜಮೀನಿನಲ್ಲಿ ಉಳುಮೆ ಮಾಡುವಾಗ ಅನೆ ದಾಳಿ ನಡೆಸಿ ಗಾಯಗೊಳಿಸಿದೆ.

ಎಸಿಯಾತು. ಪರಿಣಾಮ ನಲಕ್ಕೆ ಬದ್ದು ಪ್ರಜ್ಞೆ ತಪ್ಪಿದೆ. ಆಷ್ಟಕ್ಕೆ ಅನೆ ಮುಂದೆ ಹೋಗಿದೆ. ದೇವರ ದಯೆಯಿಂದ ಬದುಕಿಕೊಂಡೆ' ಎಂದು ರೈತ ವಿಷಕಂಠಯ್ಯ ತಿಳಿಸಿದರು. ಅವರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಘಟನೆ ಬಗ್ಗೆ ಮಾಹಿತಿ ಪಡೆಯುತ್ತಿದ್ದಂತೆ ಸ್ಥಳಕ್ಕೆ ಅರಣ್ಯಾಧಿಕಾರಿ ಮನ್ಸೂರ್ ಅಲಿಖಾನ್ ಹಾಗೂ ಸಿಬ್ಬಂದಿ ಭೇಟಿ ನೀಡಿದರು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118396
ಸರ್ವೆ ಮಹಡಿ, ಇಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ - 560095, ಭಾರತ
ಮೂರವಾಣಿ: +91 80 68240000 ಫ್ಯಾಕ್ಸ್: +91 80 68240001
corporateaffairs@teamlease.com | www.teamleasegroup.com

TeamLease
Putting India to Work

ನಿರ್ದೇಶಕರುಗಳ ಸಭೆಯ ನೋಟೀಸು

ಈ ಮೂಲಕ ನೋಟೀಸು ನೀಡಲಾಗುತ್ತಿರುವುದೇನೆಂದರೆ, ಸೆಕ್ಯೂರಿಟೀಸ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಅಸ್ಥಿಂಗ್ ಆಬ್ಲಿಗೇಶನ್ಸ್ ಆಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್ (ಎಲ್‌ಒಡಿಆರ್), 2015, ನಿಬಂಧನೆಗಳ 47(1)(ಎ)ರ ನಿಬಂಧನೆಯ ಅನುಸಾರ, ಕಂಪನಿಯ ನಿರ್ದೇಶಕರುಗಳ ಸಭೆಯನ್ನು ಶುಕ್ರವಾರ, ಜುಲೈ 26, 2019 ರಂದು ಭಾರತೀಯ ಕಾಲಮಾನ ಮಧ್ಯಾಹ್ನ 2 ಗಂಟೆಗೆ ರಂದೇ ಜೂನ್, 2019 ರಂದು ಪ್ರೈಮಾಸಿಕಕ್ಕೆ ಕೊನೆಗೊಂಡ ಒಗ್ಗೂಡಿಸ ಅಪರಿಶೋಧಿತ, ಪ್ರಕ್ಷೇಪಿಕ ಆರ್ಥಿಕ ಫಲಿತಾಂಶಗಳನ್ನು ಮತ್ತು ಇತರ ಅಂಶಗಳ ಜೊತೆಯಲ್ಲಿ ಪರಿಗಣಿಸುವ ಸಲುವಾಗಿ ನಡೆಸಲಾಗುತ್ತದೆ.

ನಿರ್ದೇಶಕರುಗಳ ಸಭೆಯ ನೋಟೀಸಿನ ಮಾಹಿತಿಯು ಕಂಪನಿಯ ವೆಬ್‌ಸೈಟ್ www.teamleasegroup.com ನಲ್ಲಿ ಹಾಗೂ ಸಂಸ್ಥೆ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು ಸ್ಟಾಕ್‌ಸಲ್ ಸ್ಟಾಕ್ ಎಕ್ಸ್‌ಚೆಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಇಲ್ಲಿ ಕೂಡ ಲಭ್ಯವಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/-
ಅಲಕ ಪಂಡ
ಕಂಪನಿ ಸೆಕ್ರಟರಿ ಮತ್ತು ಕಂಪ್ಲೈಯನ್ಸ್ ಅಫೀಸರ್

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 16, 2019

ಕಾರ್ಯದರ್ಶಿಗಳು ಹಾಗೂ ಖಜಾಂಚಿಗಳ ಕಛೇರಿ,
ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ,
ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ,
'ಶಿಕ್ಷಕರ ಸದನ' ಕೆ.ಜಿ.ರಸ್ತೆ, ಬೆಂಗಳೂರು–560 002.

ಸಂಖ್ಯೆ:ಎಫ್5/ಶಿಕ್ಷಕರ ಸದನ/ಹೊರಗುತ್ತಿಗೆ ಸಿಬ್ಬಂದಿ ನೇಮಕ/65/2019–2020
ದಿನಾಂಕ: 12.07.2019

ಅಲ್ಪಾವಧಿ ಟೆಂಡರ್ ಪ್ರಕಟಣೆ
E-Procurement ಮುಖಾಂತರ

"ಶಿಕ್ಷಕರ ಸದನ" ಕಟ್ಟಡದ ನಿರ್ವಹಣೆಗಾಗಿ ವಿವಿಧ ಹುದ್ದೆಗಳ ಸೇವೆ ಒದಗಿಸುವ ಬಗ್ಗೆ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ಮಾಹೆವಾರು ರೂ: 5,00,000/–ಗಳು ಹಾಗೂ ಇ.ಎಂ.ಡಿ ಮೊತ್ತ ರೂ:1,20,000/–ಗಳು ಆಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಇ–Procurement ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು. ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.08.2019 ಅಪರಾಹ್ನ 5.30 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ–Procurement ವಿಳಾಸ: https://www.eproc.karnataka.gov.in, Helpline No.: 080–23010900 ಸಂಪರ್ಕಿಸಬಹುದು.

ಸಹಿ/–
ಉಪನಿರ್ದೇಶಕರು ಹಾಗೂ
ಪ್ರಭಾರಾಧಿಕಾರಿಗಳು

DIPR/DDU/768/2019-20

ನಿಧನ ವಾರ್ತೆ

ಬಾಪೂಜಿ ಪಾಲ್ಕಿ

ಬಾಪೂಜಿ

ಬೆಂಗಳೂರು: ಸಂಜಯನಗರ 2ನೇ ಹಂತದ ನಿವಾಸಿ ಬಾಪೂಜಿ ಎಸ್. ಪಾಲ್ಕಿ (70) ಅವರು ಸೋಮವಾರ ರಾತ್ರಿ ಹೃದಯಾಘಾತದಿಂದ ನಿಧನ ಹೊಂದಿದರು.

ಅವರಿಗೆ ತಾಯಿ,ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಕಲಬುರ್ಗಿಯವರಾಗಿದ್ದ ಬಾಪೂಜಿ, ಹೆವಿ ಎಲೆಕ್ಟ್ರಿಕಲ್ ಉಪಕರಣಗಳ ತಯಾರಿಕಾ ಕಂಪನಿಯಾದ 'ಎಬಿಬಿ'ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

'ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಗುರುವಾರ (ಜುಲೈ 18) ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಕುಟುಂಬದವರು ತಿಳಿಸಿದ್ದಾರೆ.

ಸಂಪರ್ಕಕ್ಕೆ: 84471–70921.

ನಾರಾಯಣ ಗೌಡ

ನಾರಾಯಣ ಗೌಡ

ಬೆಂಗಳೂರು: ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲ ಗೌಡ ಅವರ ತಂದೆ ಅಂಬ್ಲಿಕಲ್ ನಾರಾಯಣ ಗೌಡ (89) ಅವರು ಮಂಗಳವಾರ ಸಂಜೆ ನಿಧನರಾದರು.

'ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಮುಳಬಾಗಿಲು ತಾಲ್ಲೂಕು ಅಂಬ್ಲಿಕಲ್‌ನ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು. ಅವರಿಗೆ ಪತ್ನಿ, ಏಳು ಜನ ಪುತ್ರರು ಮತ್ತು ಪುತ್ರಿ ಇದ್ದಾರೆ.

ಅಂತ್ಯಕ್ರಿಯೆ ಬುಧವಾರ (ಜು.17) ಮಧ್ಯಾಹ್ನ 2ಕ್ಕೆ ನಡೆಯಲಿದೆ' ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗೆ 99725–29424 ಸಂಪರ್ಕಿಸಬಹುದು.